# ಪೆರಿಯಾರ್ ಎಂಬ ಸಾಕ್ರಟಿಸ್

ದೇವರಿಲ್ಲ, ದೇವರಿಲ್ಲ, ದೇವರಿಲ್ಲ, ದೇವರನ್ನು ನಂಬುವಾತ ಕಡುಮೂರ್ಖ! ವಿಚಾರವಾದಿ ಪೆರಿಯಾರ್ ಅವರ ಪ್ರತಿ ಸಭೆ ಆರಂಭವಾಗುತ್ತಿದ್ದುದು ಈ ಘೋಷಣೆಯೊಂದಿಗೆ. ಜನಸಾಮಾನ್ಯರಿಗೆ ಆರ್ಯ ಮತ್ತು ದ್ರಾವಿಡರ ಅಂತರವನ್ನು ಅರ್ಥಮಾಡಿಸಲೆಂದೇ ಅವರು ಈ ಮಾತುಗಳನ್ನು ಆಡುತ್ತಿದ್ದರು. ಭೂಲೋಕದಲ್ಲಿ ನಡೆದಾಡುವ ದೇವತೆಗಳೆನಿಸಿಕೊಂಡ ಬ್ರಾಹ್ಮಣರನ್ನು ಆರ್ಯರೆಂದು, ಉಳಿದ ಜಾತಿಗಳನ್ನು ದ್ರಾವಿಡ ಎಂದು ಪೆರಿಯಾರ್ ಗುರ್ತಿಸಿದ್ದರು.

ದೇವರನ್ನು ನಂಬುವ ಕೆಳವರ್ಗದವರು ದೇವರು, ಪೂಜಾರಿಗಳೆಂಬ ಮೋಡಿಗೆ ಒಳಗಾಗಿದ್ದರು. ಇವರನ್ನು ಬಡಿದೆಬ್ಬಿಸಬೇಕೆಂದರೆ ಒರಟು ವ್ಯಂಗ್ಯ ಭಾಷೆಯನ್ನು ಬಳಸುವ ಅನಿವಾರ್ಯತೆಯನ್ನು ಪೆರಿಯಾರ್ ಮೊದಲ ಬಾರಿಗೆ ಕಂಡುಕೊಂಡಿದ್ದರು.

ಪೆರಿಯಾರ್ ಮೂಲ ಹೆಸರು ಈರೋಡು ವೆಂಕಟಸ್ವಾಮಿ ನಾಯಕರ್. ವೆಂಕಟನಾಯಕರು ಹಾಗೂ ಚಿನ್ನತಾಯಮ್ಮಾಳ್ ದಂಪತಿಯ ನಾಲ್ಕುಮಕ್ಕಳಲ್ಲಿ ಎರಡನೆಯವರು. ಅವರ ತಾಯಿ ಮಕ್ಕಳಿಲ್ಲದ ವಿಧವೆಯಾದ ಗಂಡನ ಬಂಧುವೊಬ್ಬರಿಗೆ ಪೆರಿಯಾರ್ ಅವರನ್ನು ಸಾಕಲು ಕೊಟ್ಟಿದ್ದರು. ಅಂಕೆ ಇಲ್ಲದೆ ತಿರುಗಾಡುತ್ತಾ ಹಟವಾದಿಯಾಗಿ ಬೆಳೆಯುತ್ತಾರೆ. ಮುಂದೆ ಅಂಗಡಿಯಲ್ಲಿ ದಲ್ಲಾಳಿ ಕೆಲಸಕ್ಕೆ ತೊಡಗಿಸುತ್ತಾರೆ. ದೈವಭಕ್ತರಾದ ಇವರ ತಾಯಿ ಬಾಲ್ಯದಲ್ಲಿ ಪ್ರತಿನಿತ್ಯ ಮಾಂಸ ತಿನ್ನುವ ಇವರ ತಟ್ಟೆಲೋಟಗಳನ್ನು ತೊಳೆದು ಇಡುತ್ತಿದ್ದರು. ಅಡುಗೆಮನೆಗೆ ಸೇರಿಸುತ್ತಿರಲಿಲ್ಲ. ಮದುವೆಯಾದ ಕೂಡಲೇ ಅವರನ್ನು ಮನೆಯಿಂದ ಪ್ರತ್ಯೇಕವಾಗಿಸಿ ದೂರವಿಡುತ್ತಾರೆ.

ರಾಷ್ಟ್ರಮಟ್ಟದಲ್ಲಿ 'ದ್ರಾವಿಡ ಕಳಗಂ' ಹುಟ್ಟುಹಾಕಿದ ಪೆರಿಯಾರ್ 'ನನ್ನ ಚರಿತ್ರೆಯಲ್ಲಿ ನನಗೆ ನಾಯಕರೇ ಇಲ್ಲ' ಎಂದು ಹೇಳುತ್ತಾರೆ. ಚಿಕ್ಕ ವಯಸ್ಸಿನಿಂದಲೂ ಸ್ವತಂತ್ರ ಮನೋಭಾವವುಳ್ಳ ಅವರು ಬೇರೆಯವರು ಹೇಳುವ ರೀತಿಯಲ್ಲಿ ಬದುಕಲೇ ಇಲ್ಲ. ಪೆರಿಯಾರ್ ಅವರಿಗೆ ಹತ್ತೊಂಬತ್ತನೇ ವಯಸ್ಸಿನಲ್ಲಿ ಹದಿಮೂರು ವಯಸ್ಸಿನ ನಾಗಮ್ಮಾಳ್ ಜೊತೆಗೆ ಮದುವೆಯಾಗುತ್ತದೆ. ಒಂದು ಹೆಣ್ಣುಮಗು ಜನಿಸಿ ಅದು ಐದು ತಿಂಗಳಿಗೇ ಸತ್ತುಹೋಗುತ್ತದೆ.

ಒಮ್ಮೆ ತಂದೆ ಜೊತೆ ಏರ್ಪಟ್ಟ ವಿಚಾರ ಸಂಘರ್ಷದಿಂದ ಮನೆಬಿಟ್ಟು ಕೊನೆಗೆ ಕಾಶಿ ತಲುಪುತ್ತಾರೆ. ಹಸಿವೆಯನ್ನು ತಡೆಯಲಾರದೆ ಅಲ್ಲಿನ ಅನ್ನಛತ್ರಕ್ಕೆ ಜನಿವಾರ ಹಾಕಿಕೊಂಡು ಒಳಹೋಗುವ ಪ್ರಯತ್ನ ಮಾಡುತ್ತಾರೆ. ಅಲ್ಲಿನ ಕಾವಲುಗಾರ ಇವರ ಮೀಸೆಯನ್ನು ಕಂಡು ಬ್ರಾಹ್ಮಣರಲ್ಲವೆಂದು ತಿಳಿದು ಹೊರಗೆ ಎಂಜಲೆಲೆಯ ಮೇಲೆ ತಳ್ಳುತ್ತಾನೆ. ಅಲ್ಲಿನ ಎಂಜಲನ್ನವನ್ನು ತಿಂದು ತಲೆಯೆತ್ತಿದಾಗ, ಅದೊಂದು ದ್ರಾವಿಡ ಮೂಲದ ಶ್ರೀಮಂತನಿಗೆ ಸೇರಿದ ಛತ್ರ ಎಂದು ಗೊತ್ತಾಗುತ್ತದೆ. ಅನ್ನ ತಿನ್ನಲು ಅಡ್ಡ ಬರುವ ಜಾತಿ ವ್ಯವಸ್ಥೆಯ ವಿರುದ್ಧ ಹೋರಾಡುವುದೇ ತನ್ನ ಜೀವನದ ಮುಖ್ಯಗುರಿ ಎಂದು ನಿರ್ಧರಿಸುತ್ತಾರೆ. ಮೋಕ್ಷದ ಸ್ಥಳದಲ್ಲಿ ನಡೆಯುವ ಅನಾಚಾರ, ಶೋಷಣೆ, ಪುರೋಹಿತಶಾಹಿಗಳ ಕ್ರೌರ್ಯ, ಅರೆಬೆಂದ ಹೆಣಗಳಿಂದ ತುಂಬಿದ ಗಂಗೆ, ಇವೆಲ್ಲವೂ ಭಾರತದ ಸನಾತನ ಮೌಲ್ಯಗಳ ಬಗ್ಗೆ, ಅದನ್ನು ರೂಪಿಸದ ಪುರಾಣಗಳ ಬಗ್ಗೆ ಅಲೋಚಿಸುವಂತೆ ಮಾಡುತ್ತದೆ.

ಒಮ್ಮೆ ಈರೋಡಿಗೆ ಪ್ಲೇಗ್ ಬಂದು ನೂರಾರು ಜನ ಸತ್ತು, ಸಾವಿರಾರು ಜನ ಊರುಬಿಟ್ಟು ಹೋದರು. ಅಂಟುಜಾಡ್ಯವೆಂಬ ಕಾರಣಕ್ಕೆ ಜನ ತಮ್ಮ ಬಂಧುಬಾಂಧವರ. ಉತ್ತರಕ್ರಿಯೆ ಮಾಡಲು, ಹೆಣ ಮುಟ್ಟಲು ಅಂಜಿದಾಗ ತಾವೇ ಹೆಣಗಳನ್ನು ಹೊತ್ತು ಸ್ಮಶಾನಕ್ಕೆ ಸಾಗಿಸುತ್ತಾರೆ. ಹೀಗೆ ಅವರ ಜೀವನ ಜನಮುಖಿಯಾಗುತ್ತದೆ. ಹಿಂದೂಧರ್ಮದ ಜಾತಿಪದ್ಧತಿ, ವೇದ ಶಾಸ್ತ್ರಗಳ ಅಧ್ಯಯನ, ಶೂದ್ರ ಸಮುದಾಯದ ಮೌಢ್ಯಗಳ ಬಗ್ಗೆ ಚರ್ಚೆ ಸಂವಾದದ ಮೂಲಕ ಗಟ್ಟಿಯಾಗುತ್ತಾರೆ. ಮೌಢ್ಯದ ವಿರುದ್ಧ ಅರಿವು ಮೂಡಿಸುವ ಹೋರಾಟ ಆರಂಭಿಸುತ್ತಾರೆ. ಈ ಹೋರಾಟದಲ್ಲಿ ಅವರ ಪತ್ನಿ ಜೊತೆಗೂಡುತ್ತಾರೆ.

ಈರೋಡು ನಗರಸಭೆಯ ಅಧ್ಯಕ್ಷರಾಗಿದ್ದ ಸಂದರ್ಭದಲ್ಲಿ ಸಿ. ರಾಜಗೋಪಾಲಚಾರಿ (ರಾಜಾಜಿ), ಪಿ.ವರದರಾಜುಲು ನಾಯಿಡು ಸ್ನೇಹ ಒದಗಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುತ್ತಾರೆ. ಒಮ್ಮೆ ಗಾಂಧೀಜಿ ಇವರ ಮನೆಗೆ ಬಂದಾಗ ಮದ್ಯಪಾನದಿಂದ ಹೆಂಗಸರ ಮೇಲಾಗುವ ಪರಿಣಾಮ ಕುರಿತು ಗಮನ ಸೆಳೆಯುತ್ತಾರೆ. ಮದ್ಯಪಾನ ನಿಷೇಧದ ವಿಚಾರ ಹೀಗೆ ಇವರ ಮನೆಯಲ್ಲಿ ರೂಪುಗೊಂಡು ಮುಂದೆ ಗಾಂಧಿ ಬ್ರಿಟೀಷ್ ಸರ್ಕಾರದ ಮೇಲೆ ಮದ್ಯಪಾನ ನಿಷೇಧ ಕಾನೂನು ರೂಪಿಸಲು ಒತ್ತಾಯಿಸುತ್ತಾರೆ.

ಕಮ್ ನಗರದ ದೇವಾಲಯದ ಬೀದಿಗಳಲ್ಲಿ ಅಸ್ಪೃಶ್ಯರ ಪ್ರವೇಶದ ಹಕ್ಕಿಗಾಗಿ ಹೋರಾಡುತ್ತಾರೆ. 'ಗುರುಕುಲಂ' ಎಂಬ ಹಾಸ್ಟೆಲಿನಲ್ಲಿದ್ದ ಬ್ರಾಹ್ಮಣ ಮತ್ತು ಅಬ್ರಾಹ್ಮಣರ ನಡುವಿನ ಪಂಕ್ತಿಭೇಧ ಪ್ರಶ್ನಿಸುತ್ತಾರೆ. ಕಾಂಚೀಪುರದಲ್ಲಿ ನಡೆದ ಕಾಂಗ್ರೆಸ್ ಸಮ್ಮೇಳನದಲ್ಲಿ ದ್ರಾವಿಡರ ಕೋಮು ಪ್ರಾತಿನಿಧ್ಯಕ್ಕಾಗಿ ಮಂಡಿಸಿದ ಗೊತ್ತುವಳಿ ಪುರೋಹಿತಶಾಹಿಗಳ ತಂತ್ರದಿಂದಾಗಿ ಅಂಗೀಕಾರವಾಗುವುದಿಲ್ಲ. ಕಾಂಗ್ರೆಸ್ಸಿಗೆ ವಿದಾಯ ಹೇಳಿದ ಅವರು ದ್ರಾವಿಡ ನಾಯಕರು ಹಾಗೂ ಇತರರೊಂದಿಗೆ ಹೊರಬರುತ್ತಾರೆ.

1925ರಲ್ಲಿ 'ಸ್ವ ಮರ್ಯಾದಾ' ಚಳವಳಿ ಸ್ಥಾಪಿಸಿ, ತುಳಿತಕ್ಕೊಳಗಾದ ದ್ರಾವಿಡರನ್ನು ಎಚ್ಚರಿಸಲೆಂದೇ 'ಕುಡಿಅರಸು' ಪತ್ರಿಕೆಯನ್ನು ಆರಂಭಿಸುತ್ತಾರೆ. ಯಾವುದೇ ಜನಾಂಗದ ಹಿರಿಯ ವ್ಯಕ್ತಿಯ ಸಾನ್ನಿಧ್ಯದಲ್ಲಿ ವಧೂವರರು ಹಾರ ಬದಲಾಯಿಸಿಕೊಂಡು ತಾಳಿಯ ಸಂಕೋಲೆಯಿಲ್ಲದೆ ಸಂಗಾತಿಗಳಾಗಿ ಬಾಳ್ವೆ ನಡೆಸುವ ಪ್ರಮಾಣ ವಚನ ಸ್ವೀಕರಿಸುವ ಹೊಸ ವಿವಾಹ ಪದ್ಧತಿಯನ್ನು ರೂಪಿಸುತ್ತಾರೆ.

ಜಸ್ಟೀಸ್ ಪಾರ್ಟಿಯ ಅಧ್ಯಕ್ಷರಾಗಿದ್ದ ಪೆರಿಯಾರ್ ಅದನ್ನು 'ದ್ರಾವಿಡ ಕಳಗಂ' ಎಂಬ ಹೊಸ ಹೆಸರಿನಿಂದ ರೂಪಿಸಿದರು. ಪೆರಿಯಾರ್ ತಮ್ಮ ಪತ್ನಿಯ ನಿಧನದ ನಂತರ ಪಾರ್ಟಿಯಲ್ಲಿದ್ದ ಮಣಿಯಮ್ಮ ಎಂಬ ಕಿರಿಯ ವಯಸ್ಸಿನ ಯುವತಿಯನ್ನು ವಿವಾಹವಾದ ಕಾರಣ ಹಾಗೂ ವೈಚಾರಿಕ ಭಿನ್ನತೆಗಳಿಂದಾಗಿ ಸಿ.ಎನ್. ಅಣ್ಣಾದೊರೈ ಇತರರು ದ್ರಾವಿಡ ಕಳಗಂನಿಂದ ಹೊರಬರುತ್ತಾರೆ. ಮುಂದೆ 'ದ್ರಾವಿಡ ಮುನ್ನೇತ್ರ ಕಳಗಂ' ಎಂಬ ಹೊಸ ಪಕ್ಷದ ಜನನವಾಗುತ್ತದೆ. ದ್ರಾವಿಡ ಚಳವಳಿ ಇಬ್ಭಾಗವಾದರೂ ಪೆರಿಯಾರರ ವೈಚಾರಿಕ ಚಿಂತನೆಗಳು ಯಾವುದೇ ತಡೆಯಿಲ್ಲದೆ ಮಾನ್ಯತೆ ಹಾಗೂ ಚಾಲನೆಯನ್ನು ಪಡೆದವು.

ಪೆರಿಯಾರ್ ರಾಮಾಯಣ, ಮಹಾಭಾರತಗಳನ್ನು ವಿಮರ್ಶಾತ್ಮಕವಾಗಿ ವಿಶ್ಲೇಷಿಸಿದರು. ಹಿಂದೂ ಧರ್ಮದಿಂದ ಹೊರಬಂದು ಅಂಬೇಡ್ಕರ್ ಬೌದ್ಧಧರ್ಮವನ್ನು ಸ್ವೀಕರಿಸಹೊರಟಾಗ ನಿಮ್ಮೊಂದಿಗೆ ಇತರರನ್ನೂ ಕರೆದೊಯ್ಯಿರಿ ಎಂದು ಹೇಳಿದರು. ಆದರೆ ಅವರು ಮಾತ್ರ ಧರ್ಮ ಬಂಧನವೆಂದು ನಂಬಿದ್ದರು. ಅವರ ಪ್ರಕಾರ 'ಬೌದ್ಧ' ಧರ್ಮವಲ್ಲ, ಜೀವನವಿಧಾನವಾಗಿತ್ತು. ಈ ವಿಚಾರವಾದಿಯನ್ನು ಯುನೆಸ್ಕೋ 'ಏಷ್ಯಾದ ಸಾಕ್ರಟಿಸ್' ಎಂದು ಗೌರವಿಸಿತು. ತಮಿಳಿನಲ್ಲಿ 'ಪೆರಿಯಾರ್' ಎಂದರೆ ಹಿರಿಯರು ಎಂದರ್ಥ. ಜಾತಿ ವ್ಯವಸ್ಥೆಯ ಕಪ್ಪುಚುಕ್ಕೆ ವಿರುದ್ಧ ಹೋರಾಡಿದ ಪೆರಿಯಾರ್ ಕಪ್ಪು ವಸ್ತ್ರಗಳನ್ನು ಸಾಂಕೇತಿಕವಾಗಿಯೇ ತೊಡುತ್ತಿದ್ದರು.

■ **ಅಮೃತಮತಿ**

## ಮಾತೇ ಮುತ್ತು

- ಹೆಂಡತಿ ಗುಣವಂತೆಯಾದರೆ ಎಲ್ಲ ಭಾಗ್ಯವೂ ಇದ್ದಂತೆ. ಗುಣವಂತೆಯಲ್ಲದಿದ್ದರೆ ಎಷ್ಟು ಭಾಗ್ಯವಿದ್ದರೂ ಇಲ್ಲದಂತೆಯೇ.
  —ತಿರುಕ್ಕುರಳ್
- ಹೆಣ್ಣಿನಲ್ಲಿ ಹುದುಗಿದ ಮಾತೃಭಾವ ಅದ್ಭುತ ವಸ್ತು. ಆ ಭಾವ ಪ್ರಕಟಣೆಗೆ ಅವಕಾಶ ಇಲ್ಲದಿದ್ದರೆ ಅವರ ಜೀವನವೇ ಬರಡಾಗುತ್ತದೆ.
  —ಶಿವರಾಮ ಕಾರಂತ
- ರಾಜಕಾರಣದಲ್ಲಿ ಅವಿಶ್ವಾಸ, ಕೃತಘ್ನತೆ ಎಷ್ಟು ಅಪಾಯಕರವೊ, ಕೃತಜ್ಞತೆ, ವಿಶ್ವಾಸ, ಮಿತ್ರತ್ವ ಕೂಡ ಅಷ್ಟೇ ಅಪಾಯಕಾರಿ.
  —ಜಾನ್ ಆಡಂಸ್
- ಮಾಡದಿರು ಬಾಳನ್ನು ಬೇಳೆಯಂತೆ, ಕೂಡಿರಲಿ ಬಾಳು ಇಡಿಗಾಳಿನಂತೆ.
  —ದ.ರಾ. ಬೇಂದ್ರೆ